ಮರ ಮಾರಾಟದ ಒಟ್ಟು ಆದಾಯ ರೂ. 1, 32, 43, 559-00. 1995-96ನೇ ಸಾಲಿನಲ್ಲಿ ಕೈಗೊಳ್ಳಬೇಕಾದ ರೀಪ್ಲಾಂಟೇಷನ್‌ಗಾಗಿ 1993-94 ಮತ್ತು 1994-95ನೇ ಸಾಲಿನಲ್ಲಿ ಸಸ್ಯಗಾರ ಕೆಲಸಗಳಿಗೆ ತಗಲಿದ ಒಟ್ಟು ವೆಚ್ಚ ರೂ. 30, 86, 064-00 ಆಗಿರುತ್ತದೆ.

ಇ) ಸುಳ್ಯ ಮತ್ತು ಐವರ್ನಾಡು ರಬ್ಬರ್ ವಿಭಾಗದ 1961:62:63 ನೆಡುತೋಪುಗಳನ್ನು 1994-95ರಲ್ಲಿ ಕಡಿದು ಆ ಪ್ರದೇಶದಲ್ಲಿ 1995-96ರಲ್ಲಿ ಮರುನಾಟಿ ಮಾಡಬೇಕಾಗಿರುವುದರಿಂದ ಅಲ್ಲಿ ಕೆಲಸ ನಿರ್ವಹಿಸುತ್ತಿದ್ದ ಕಾರ್ಮಿಕರನ್ನು ನಿಗಮದ ಇತರ ವಿಭಾಗಗಳಿಗೆ ವರ್ಗಾವಣೆ ಮಾಡಲಾಗಿರುತ್ತದೆ. ಈ ರೀತಿಯಾಗಿ ಕೆಲಸ ನಿರ್ವಹಿಸುತ್ತಿದ್ದ ಒಟ್ಟು 99 ಮಂದಿ ಕಾರ್ಮಿಕರನ್ನು ಈ ಕೆಳಗಿನಂತೆ ವರ್ಗಾವಣೆ ಮಾಡಿ ಬದಲಿ ಕೆಲಸದ ವ್ಯವಸ್ಥೆ ಮಾಡಲಾಗಿದೆ.

1) ಸುಳ್ಯ ರಬ್ಬರ್ ವಿಭಾಗ	-	44
2) ಪುತ್ತೂರು ರಬ್ಬರ್ ವಿಭಾಗ	-	28
3) ಐವರ್ನಾಡು ರಬ್ಬರ್ ವಿಭಾಗ	-	27
		99

ವಿಷಯ :-ಸುಳ್ಯ ಕೇತ್ರದ ಪ್ರಾಥಮಿಕ ಆರೋಗ್ಯ ಕೇಂದ್ರ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1654 (2015)

ಶ್ರೀ ಎಸ್. ಅಂಗಾರ (ಸುಳ್ಯ):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುಳ್ಯ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕ್ಷ-ಕಿರಣ ಯಂತ್ರವು ಸರಿಯಾಗಿ ಕೆಲಸ ನಿರ್ವಹಿಸುತ್ತಿದೆಯೇ. ಇಲ್ಲದಿದ್ದಲ್ಲಿ ಯಾವ ಕಾರಣಕ್ಕಾಗಿ ಕೆಲಸ ನಿರ್ವಹಿಸುತ್ತಿಲ್ಲ.

ಆ) ಈ ಕ್ಷ-ಕಿರಣಕ್ಕೆ ತಜ್ಞರನ್ನು, ರಾಸಾಯನಿಕ ವಸ್ತುಗಳನ್ನು ಮತ್ತು ಇದಕ್ಕೆ ಅಗತ್ಯವಿರುವ ಫಿಲ್ಮ್‌ಗಳನ್ನು ಸರಬರಾಜು ಮಾಡಲಾಗಿದೆಯೇ, ಇಲ್ಲದಿದ್ದಲ್ಲಿ ಎಷ್ಟು ಸಮಯದಲ್ಲಿ ಪೂರೈಸಲಾಗುವುದು.

ಶ್ರೀ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) ನಿರ್ವಹಿಸುತ್ತಿದೆ.

ಆ) ಕ್ಷ-ಕಿರಣ ತಂತ್ರಜ್ಞರ ಹುದ್ದೆ ಖಾಲಿ ಇದೆ. ಈ ಹುದ್ದೆಯನ್ನು ಶೀಘ್ರದಲ್ಲಿ ತುಂಬಲಾಗುವುದು. ರಾಸಾಯನಿಕ ವಸ್ತುಗಳು ಮತ್ತು ಫಿಲ್ಮ್‌ಗಳನ್ನು ಸರಬರಾಜು ಮಾಡಲಾಗಿದೆ.

ವಿಷಯ :- ಕರ್ನಾಟಕ ಅರಣ್ಯ ಭೂಮಿ ನಿಗಮ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1655 (2017)

ಶ್ರೀ ಎಸ್. ಅಂಗಾರ (ಸುಳ್ಯ):- ಮಾನ್ಯ ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುಳ್ಯ ವಿಧಾನ ಸಭಾ ಕ್ಷೇತ್ರದಲ್ಲಿ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದಡಿಯಲ್ಲಿರುವ